## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

**ಸಿಸಿ ನಂ ಃ 202/2021**
**ಸಿಡಬ್ಲು ಃ 3**
**ಪಿಡಬ್ಲು ಃ 2**

**ಹೆಸರು** ಃ ಅಶೋಕ ಬಸಪ್ಪಾ ಮಜತಿ
**ವಯಸ್ಸು** ಃ 54 ವರ್ಷ
**ಉದ್ಯೋಗ** ಃ ಒಕ್ಕಲುತನ
**ವಾಸ** ಃ ದಾದಬಾನಹಟ್ಟಿ ತಾಃ ಹುಕ್ಕೇರಿ

**(ದಿನಾಂಕಃ 03-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ ಃ ಸಸಅಃರವರಿಂದ** ಸರಕಾರದ ಪರವಾಗಿ ಃ

ಚಾಸಾ-2 ನನಗೆ ಗೊತ್ತಿಲ್ಲ. ನಿ.ಪಿ-1 ರ ಪಂಚನಾಮೆ ನೋಡುತ್ತಿದ್ದೇನೆ . ಅದಕ್ಕೆ ನಾನು ಸುಮಾರು 12 ವರ್ಷಗಳ ಹಿಂದೆ ಪೋಲಿಸರ ಕೋರಿಕೆ ಮೇರೆಗೆ ಯಮಕನಮರಡಿಗೆ ಪೋಲಿಸ ಠಾಣೆಯಲ್ಲಿ ಸಹಿ ಮಾಡಿದ್ದೇನೆ . ಅದರಲ್ಲಿ ಏನು ಬರದಿದೆ ನನಗೆ ಗೊತ್ತಿಲ್ಲ. ಸಾಕ್ಷಿ ಸಹಿಯನ್ನು ನಿಪಿ-1(ಸಿ) ಮತ್ತು 1(ಡಿ) ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

ದಿನಾಂಕ 13-02-2013 ರಂದು ಹುಕ್ಕೇರಿ ತಾಲೂಕಿನ ಕರಗುಪ್ಪಿ ಗ್ರಾಮದ ಹದ್ದಿನಲ್ಲಿರುವ ಬಸ್ಸಾಪೂರ ಜಾರಕಿಹೊಳಿ ಕ್ರಾಸ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಬಸವಣ್ಣಿ ಬಾಳಪ್ಪ ಗುಟಗುದ್ದಿ ಇವರು ಪೋಲಿಸರನ್ನು ನೋಡಿ ಓಡಿ ಹೋದಾಗ ಆತ ಕಳ್ಳಬಟ್ಟಿ ಸಾರಾಯಿ ತುಂಬಿದ ಪ್ಲಾಸ್ಟಿಕ ಕ್ಯಾನನ್ನು ಬಿಟ್ಟಿದ್ದ ಎಂದರೆ ಸರಿಯಲ್ಲ. ಅಲ್ಲಿ 9 ಲೀಟರಿನಷ್ಟು ಕಳ್ಳಬಟ್ಟಿ ಸಾರಾಯಿ ಇದ್ದು ಬಿಳಿ ಬಣ್ಣದ ಪ್ಲಾಸ್ಟಿಕ ಕ್ಯಾನನಲ್ಲಿದ್ದು , ಅದರಲ್ಲಿ 180 ಎಂ ಎಲ್ ನಷ್ಟು ಕ್ವಾಟರ್ ಬಾಟಲಿಯಲ್ಲಿ ಪಿ ಐ ಅಲಾನಿ ದಳ ಇವರು ನನ್ನ ಮತ್ತು ಚಾಸಾ- 2 ಇವರ ಸಮಕ್ಷಮ ಸ್ಯಾಂಪಲಗಾಗಿ ತೆಗೆದುಕೊಂಡರು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿ ಪರ  ವಕೀಲರು ಏನೂ ಇಲ್ಲ ಎಂದು ಹೇಳಿರುತ್ತಾರೆ.</u>**

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**